# ಕರ್ನಾಟಕ ಸರ್ಕಾರ
## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಪಿ.ಸಣ್ಣ ದುರುಗವ್ವ ತಾಯಿ ಹನುಮವ್ವ<br>ಶ್ರೀಮತಿ ಶಾರದಮ್ಮ ಗಂಡ ದಿ:ಪೂಜಾರಿ ಹನುಮಂತಪ್ಪ<br>ಶ್ರೀ ಪಿ ಕೆಂಚಪ್ಪ ತಾಯಿ ಶಾರಧಮ್ಮ<br>ಶ್ರೀ ಹನುಮಂತಪ್ಪ ತಂದೆ ಶಾಂತಪ್ಪ<br>ಶ್ರೀ ಮೈಲಾರಿ ತಾಯಿ ದಿ:ಶಾರದಮ್ಮ<br>ಶ್ರೀ ಶಾಂತಪ್ಪ ತಾಯಿ ದಿ:ಶಾರದಮ್ಮ<br>ಶ್ರೀ ಹನುಮಂತಪ್ಪ ತಾಯಿ ದಿ:ಗೌರಮ್ಮ<br>ಶ್ರೀ ಮಾಯಾಪ್ಪ ತಾಯಿ ದಿ:ಗೌರಮ್ಮ<br>ಶ್ರೀ ಮೂಕಪ್ಪ ತಾಯಿ ಗೌರಮ್ಮ | ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ. |

ಪೀಠಿಕೆ:-

ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಪೇಟೆ ತಾಲೂಕು ಡಣಾಯಕನಕೆರೆ ಗ್ರಾಮದ ಸ.ನಂ.351 ವಿಸ್ತೀರ್ಣ 7.83 ಎಕರೆ ಜಮೀನಿನ ಜಂಟಿ ಪಟ್ಟದಾರರಾದ 1)ದಿವಂಗತ ಶ್ರೀಮತಿ ಪಿ.ಗೌರಮ್ಮ 2)ಪಿ.ಸಣ್ಣದುರುಗವ್ವ ತಾಯಿ ಹನುಮವ್ವ 3)ಶಾರದಮ್ಮ 4)ಕೆಂಚಪ್ಪ 5)ಹನುಮಂತಪ್ಪ ತಂದೆ ಶಾತಪ್ಪ ಇವರುಗಳ ಪೈಕಿ ಶ್ರೀಮತಿ **ಗೌರಮ್ಮ** ಇವರು ದಿನಾಂಕ 29-10-1999 ರಂದು ಮೃತಪಟ್ಟಿರುತ್ತಾರೆ.ಮತ್ತು ಶ್ರೀಮತಿ **ಶಾರದಮ್ಮ** ಇವರು ದಿನಾಂಕ 21-09-2004 ರಂದು ಮೃತಪಟ್ಟರಿತ್ತಾರೆ. ಮತ್ತು ಶ್ರೀಪೂಜಾರಿ **ಹನುಮಂತಪ್ಪ** ಇವರು ಸಹ ದಿನಾಂಕ 15-08-2000 ರಂದು ಮೃತಪಟ್ಟ ಕಾರಣ ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡಲು ವಾದಿಗಳು ಈ ಕಾರ್ಯಾಲಯದ ಅರ್ಜಿ ಕಿಯೋಸ್ಕದಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಯ ಪ್ರಕಾರ ಹಕ್ಕುಬದಲಾವಣೆ ಮಾಡಲು ಕಂದಾಯ ನಿರೀಕ್ಷಕರು ಮರಿಯಮ್ಮನಹಳ್ಳಿ ಇವರು ಪ್ರಕ್ರಿಯೆ ಪ್ರಾರಂಭಿಸಲಾಗಿ ಮರಣ ಪ್ರಮಾಣ ಪತ್ರದಲ್ಲಿ ದಿವಂಗತ ಶ್ರೀಮತಿ ಗೌರಮ್ಮ ಇವರ ತಂದೆಯ ಹೆಸರು ಮಾಯಪ್ಪ ಎಂದು ನಮೂದು ಇರುವ ಕಾರಣ ಹಾಗೂ ಗಣಕೀಕೃತ ಪಹಣಿಯಲ್ಲಿ ತಂದೆಯ ಹೆಸರು ನಮೂದು ಇರದೇ ಇರುವ ಕಾರಣ ಸದರಿ ಹಕ್ಕುಬದಲಾವಣೆಯನ್ನು ಕಂದಾಯ ನಿರೀಕ್ಷಕರು ತಿರಸ್ಕರಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಂಬಂಧಿಸಿದವರಿಗೆ ನೋಟೀಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 09-06-2016 ರಂದು ಆರಂಬಿಸಿ ದಿನಾಂಕ: 18-06-2016 ರಂದು ಅಂತಿಮಗೊಳಿಸಲಾಯಿತು. ಪ್ರಕರಣದ ವಿಚಾರಣೆಗೆ ಕರೆಯಲಾಗಿ ವಾದಿ ವಿಚಾರಣೆಯಲ್ಲಿ ಹಾಜರಾಗಿರುತ್ತಾರೆ. ವಾದಿಗಳು, ತನ್ನ ತಾಯಿ ತಂದೆಯ ಹೆಸರು ಮಾಯಪ್ಪ ಎಂದು ಇದ್ದು, ಆದರೆ ಗಣಕೀಕೃತ ಪಹಣಯಲ್ಲಿ ಹೆಸರನ್ನು ನಮೂದು ಮಾಡಿಸಿರುವುದಿಲ್ಲ. ನಾವುಗಳು ದಿವಂಗತ ಶ್ರೀಮತಿ ಗೌರಮ್ಮ ಇವರುಗಳ ನೇರ ವಾರಸುದಾರರಾಗಿದ್ದು, ಪೌತಿ ವಾರಸತ್ವ ಪ್ರಕಾರ ಹಕ್ಕುಬದಲಾವಣೆ ಮಾಡುವಂತೆ ಹೇಳಿಕೆ ನೀಡಿರುತ್ತಾರೆ. ಕಾರಣ ಪೌತಿ ವಾರಸತ್ವ ಪ್ರಕಾರ ಈ ಕೆಳಗಿನಂತೆ.

ಸಂ/ಕಂ/ಪಹಣಿ/ತಕರಾರು/81/2016-17 ದಿನಾಂಕ:20/7/2016

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ವಾಸ್ತಾವಾಂಶ ಹಿನ್ನಲೆಯಿಂದಾಗಿ ಹೊಸಪೇಟೆ ತಾಲೂಕಿನ ಡಣಾಯಕನಕೆರೆ ಗ್ರಾಮದ ಸ.ನಂ.351 ವಿಸ್ತೀರ್ಣ 7.83 ಎಕರೆ ಜಮೀನನ್ನು ಪೌತಿ ವಾರಸತ್ವ ಪ್ರಕಾರ ವಾದಿಗಳ ಶ್ರೀ ಪಿ.ಸಣ್ಣ ದುರುಗವ್ವ ತಾಯಿ ಹನುಮವ್ವ ಶ್ರೀಮತಿ ಶಾರದಮ್ಮ ಗಂಡ ದಿ:ಪೂಜಾರಿ ಹನುಮಂತಪ್ಪ ಶ್ರೀ ಪಿ ಕೆಂಚಪ್ಪ ತಾಯಿ ಶಾರದಮ್ಮ ಶ್ರೀ ಹನುಮಂತಪ್ಪ ತಂದೆ ಶಾಂತಪ್ಪ ಶ್ರೀ ಮೈಲಾರಿ ತಾಯಿ ದಿ:ಶಾರದಮ್ಮ ಶ್ರೀ ಶಾಂತಪ್ಪ ತಾಯಿ ದಿ:ಶಾರದಮ್ಮ ಶ್ರೀ ಹನುಮಂತಪ್ಪ ತಾಯಿ ದಿ:ಗೌರಮ್ಮ ಶ್ರೀ ಮಾಯಾಪ್ಪ ತಾಯಿ ದಿ:ಗೌರಮ್ಮ ಶ್ರೀ ಮೂಕಪ್ಪ ತಾಯಿ ಗೌರಮ್ಮ ಹಕ್ಕುಬದಲಾವಣೆ ಮಾಡಲು ಆದೇಶಿಸಲಾಯಿತು.

ಈ ಆದೇಶವು ದಿನಾಂಕ 20/7/2016ರ ಉಕ್ತಲೇಖನ ನೀಡಿ ತೆರದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ತಹಶೀಲ್ದಾರರು ಹೊಸಪೇಟೆ

ಗೆ

ವಾದಿ ಮತ್ತು ಪ್ರತಿವಾದಿ

1 ಭೂಮಿ ಕೇಂದ್ರ

2 ಕಂದಾಯ ಪರಿವೀಕ್ಷಕರು ಮರಿಯಮ್ಮನಹಳ್ಳಿ